**ಕರ್ನಾಟಕ ಸರ್ಕಾರ**

ಸಂಖ್ಯೆ:ಸಿಆಸುಇ 75 ಆರ್‌ಟಿಐ 2019

**ಕರ್ನಾಟಕ ಸರ್ಕಾರದ ಸಚಿವಾಲಯ,**
**ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಜನಸ್ಪಂದನ)**
**3ನೇ ಮಹಡಿ, ಪೋಡಿಯಂ ಬ್ಲಾಕ್,**
**ವಿಶ್ವೇಶ್ವರಯ್ಯ ಮುಖ್ಯ ಗೋಪುರ,**
**ಬೆಂಗಳೂರು, ದಿನಾಂಕ: 01.04.2019**

**ಸುತ್ತೋಲೆ**

**ವಿಷಯ:** ಸಿಆಸುಇ(ಜನಸ್ಪಂದನ) ಮಾಹಿತಿ ಹಕ್ಕು ಕೇಂದ್ರದಲ್ಲಿ ಸ್ವೀಕರಿಸುವ ಆರ್‌ಟಿಐ ಅರ್ಜಿಗಳ ವಿಲೇವಾರಿಗೆ ಸಂಬಂಧಿಸಿದಂತೆ.

– – –

ವಿಧಾನಸೌಧ ಮತ್ತು ವಿಕಾಸಸೌಧದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಚಿವಾಲಯದ ಇಲಾಖೆಗಳಿಗೆ ಸಾರ್ವಜನಿಕರು ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 6(1)ರಡಿಯಲ್ಲಿ ಮಾಹಿತಿ ಕೋರಿಕೆ ಮನವಿಗಳನ್ನು ಸಲ್ಲಿಸಲು ಭದ್ರತಾ ದೃಷ್ಠಿಯಿಂದ ಅನಾನುಕೂಲವಾಗುತ್ತಿರುವುದನ್ನು ತಪ್ಪಿಸಲು ಬಹುಮಹಡಿ ಕಟ್ಟಡದ 5ನೇ ಹಂತದ ನೆಲಮಹಡಿಯಲ್ಲಿ "ಮಾಹಿತಿ ಹಕ್ಕು ಕೇಂದ್ರ" ವನ್ನು (ಬೆಂಗಳೂರು ಒನ್ ಕೇಂದ್ರದ ಪಕ್ಕದಲ್ಲಿ) ಸ್ಥಾಪಿಸಿದ್ದು, ಸಾರ್ವಜನಿಕರಿಂದ ಮಾಹಿತಿ ಕೋರಿಕೆ ಅರ್ಜಿಗಳನ್ನು ಮಾಹಿತಿ ಹಕ್ಕು ಕೇಂದ್ರದಲ್ಲಿ ಸ್ವೀಕರಿಸಿ ವಿಧಾನಸೌಧ ಮತ್ತು ವಿಕಾಸಸೌಧದಲ್ಲಿರುವ ಸಂಬಂಧಿಸಿದ ಸಚಿವಾಲಯದ ಇಲಾಖೆಗಳಿಗೆ ಮುದ್ದಾಂ ಮುಖಾಂತರ ತಲುಪಿಸಲಾಗುತ್ತದೆ.

ಈ ರೀತಿ ಮಾಹಿತಿ ಹಕ್ಕು ಕೇಂದ್ರದಲ್ಲಿ ಸ್ವೀಕರಿಸುವ ಮಾಹಿತಿ ಕೋರಿಕೆ ಅರ್ಜಿಗಳನ್ನು ಮುಖಪತ್ರದ ಮೂಲಕ ಕಳುಹಿಸಲಾಗುವುದಿಲ್ಲ ಹಾಗೂ ಇಲ್ಲಿ ಸ್ವೀಕರಿಸುವ ಅರ್ಜಿಗಳನ್ನು ಆಯಾ ಅರ್ಜಿಗಳಲ್ಲಿ ವಿಳಾಸಿಸಿರುವ ಇಲಾಖೆಗಳಿಗೆ ಮುದ್ದಾಂ ಮೂಲಕ ತಲುಪಿಸಲಾಗುತ್ತದೆ.

ಸಿಆಸುಇ(ಜನಸ್ಪಂದನ) ಮಾಹಿತಿ ಹಕ್ಕು ಕೇಂದ್ರದಲ್ಲಿ ವಿಧಾನಸೌಧ ಮತ್ತು ವಿಕಾಸಸೌಧದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಚಿವಾಲಯದ ಸಂಬಂಧಪಟ್ಟ ಇಲಾಖೆಗಳಿಗೆ ಮಾಹಿತಿ ಕೋರಿಕೆ ಅರ್ಜಿಗಳನ್ನು ತಲುಪಿಸುವಾಗ ಕೆಲವು ಇಲಾಖೆಗಳು ಅರ್ಜಿದಾರರು ತಮಗೆ ವಿಳಾಸಿಸಿರುವ ಅರ್ಜಿಗಳನ್ನು ಯಾವುದೇ ಕಾರಣ ನೀಡದೆ ಹಿಂದಿರುಗಿಸುವುದು ಹಾಗೂ ಮಾಹಿತಿ ಕೇಂದ್ರದ ಮುಖಪತ್ರದೊಂದಿಗೆ ಮಾಹಿತಿ ಹಕ್ಕು ಅರ್ಜಿಗಳನ್ನು ಕಳುಹಿಸುವಂತೆ ಅರ್ಜಿ ತಲುಪಿಸಲು ಬರುವ ಮಾಹಿತಿ ಕೇಂದ್ರದ ಸಿಬ್ಬಂದಿಯವರಿಗೆ ತಿಳಿಸುತ್ತಿರುವುದನ್ನು ಗಮನಿಸಲಾಗಿರುತ್ತದೆ.

ಆದ್ದರಿಂದ, ಇನ್ನು ಮುಂದೆ ಮಾಹಿತಿ ಹಕ್ಕು ಕೇಂದ್ರವು ತಲುಪಿಸುವ ಮಾಹಿತಿ ಕೋರಿಕೆ ಅರ್ಜಿಗಳನ್ನು ಆಯಾ ಅರ್ಜಿಗಳಲ್ಲಿ ವಿಳಾಸಿಸಿರುವ ಇಲಾಖೆಗಳು ಕಡ್ಡಾಯವಾಗಿ ಸ್ವೀಕರಿಸಲೇಬೇಕಾಗುತ್ತದೆ ಮತ್ತು ಮಾಹಿತಿ ಹಕ್ಕು ಅಧಿನಿಯಮ 2005ರಡಿ ನಿಗಧಿತ ಅವಧಿಯಲ್ಲಿ ಅರ್ಜಿದಾರರಿಗೆ ಮಾಹಿತಿ ಒದಗಿಸಲು ಕ್ರಮಕೈಗೊಳ್ಳಬೇಕಾಗುತ್ತದೆ ಹಾಗೂ ಒಂದು ವೇಳೆ ಮಾಹಿತಿ ಕೋರಿಕೆ ಅರ್ಜಿಯು ತಮಗೆ ಸಂಬಂಧಪಡದ ಪಕ್ಷದಲ್ಲಿ ಸಂಬಂಧಿಸಿದ ಇಲಾಖೆಗೆ ಮಾಹಿತಿ ಹಕ್ಕು ಅಧಿನಿಯಮ 2005ರ ಪ್ರಕರಣ 6(3)ರಡಿ ವರ್ಗಾಯಿಸಬೇಕಾಗುತ್ತದೆ.

ಮೇಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ತಮ್ಮ ಇಲಾಖೆಯ ಅಧೀನದಲ್ಲಿ ಬರುವ ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ಸೂಚಿಸುವಂತೆ ಕೋರಿದೆ.

(ಪರಮೇಶ್ ಪಾಂಡೆ),
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಜನಸ್ಪಂದನ)

**ಇವರಿಗೆ,**
ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.

**<u>ಪ್ರತಿ ಮಾಹಿತಿಗಾಗಿ:–</u>**

1) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3) ಕಾರ್ಯದರ್ಶಿಗಳು, ಕರ್ನಾಟಕ ಮಾಹಿತಿ ಆಯೋಗ, ಮಾಹಿತಿಸೌಧ, ಬೆಂಗಳೂರು.